# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## 2021–22ನೇ ಸಾಲಿನ ಮಾದರಿ ಪ್ರಶ್ನೆಪತ್ರಿಕೆ

**ವಿಷಯ : ದ್ವಿತೀಯ ಭಾಷೆ ಕನ್ನಡ** **ವಿಷಯದ ಸಂಕೇತ: 33K**

**ಸಮಯ: 3 ಗಂಟೆಗಳು** **ಗರಿಷ್ಠ ಅಂಕಗಳು : 80**

**ಶಾಲಾ ಅಭ್ಯರ್ಥಿಗಳಿಗಾಗಿ**

---

***ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **4x1=4**

1. ಆದೇಶ ಸಂಧಿಗೆ ಉದಾಹರಣೆಯಾಗಿರುವ ಪದ

ಎ) ಗುರುವನ್ನು ಬಿ) ದೇವಾಲಯ

ಸಿ) ಬೆಟ್ಟದಾವರೆ ಡಿ) ಮಾತಿಲ್ಲ

2. ಸರ್ವನಾಮ ಪದವಿದು

ಎ) ಅವನು ಬಿ) ಪೂರ್ವ

ಸಿ) ಹತ್ತು ಡಿ) ಬಿಳುಪು

3. ಸಪ್ತಮಿ ವಿಭಕ್ತಿ ಪ್ರತ್ಯಯವಿದು

ಎ) ಅನ್ನು ಬಿ) ಅಲ್ಲಿ

ಸಿ) ಗೆ ಡಿ) ಇಂದ

4. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳು

ಎ) ಆರು ಬಿ) ಏಳು

ಸಿ) ಎಂಟು ಡಿ) ಹತ್ತು

**II** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **12x1=12**

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?
6. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯ ಗಳಿಸಿದ್ದರು?
7. ಸಸ್ತನಿಗಳ ಆಶ್ರಯದಾಣಗಳು ಯಾವುವು?
8. ಹಕ್ಕಿಗಳು ಗೂಡುಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
9. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣ ಯಾವುದು?
10. ಗುರುಗಳು ಹೇಳಿದಂತೆ ಕಾಫಿ ಮತ್ತು ಕಾಫಿಯ ಕಪ್ಪು ಯಾವುದರ ಪ್ರತೀಕಗಳು?
11. ಏಣಿಗೆ ಬೀಳುವ ಭಯವಿಲ್ಲ ಏಕೆ?
12. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?
13. ತಿಮಿರಕ್ಕೆ ವೈರಿ ಯಾವುದು?

14. ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?

15. ತುಂಬಿದ ಕುಣಿಗಲ್ ಕೆರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ?

16. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು?

**III ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8x2=16**

17. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆಗಳೇನು?

18. ಪೆನ್ನು ಖಡ್ಗಕ್ಕಿಂತ ಹರಿತವಾದದ್ದು ಏಕೆ?

19. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

20. ಗೋಪಾಲನು ಹೂಬನದ ಸೊಗಸನ್ನು ಯಾವ ರೀತಿ ವರ್ಣಿಸಿದನು?

21. ಏಣಿ ಹೇಳಿಕೊಳ್ಳುವ ಕಷ್ಟಗಳೇನು?

22. ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ?

23. ವೈದ್ಯರ ಯಾವ ಮಾತುಗಳು ಭೀಮ ನಾಯಕನ ಮನಸ್ಸನ್ನು ಚುಚ್ಚಿದವು?

24. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?

**IV ಕೆಳಗಿನ ಕವಿ/ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 1x3=3**

25. ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

**V ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯ ರೂಪದಲ್ಲಿ ಬರೆಯಿರಿ. 1x3=3**

26. ನರನೊಳಗೆ ನಾರಾಯಣನ ರೂಪು ಕಂಡು

ತಿರೆಯೊಳಗೆ ಸುರಪುರದ ಮೈಸಿರಿಯನುಂಡು

ಪರಹಿತಕೆ ಬಳಲುತಿರಲದುವೆ ಜೀವನವು

ಪೆರತೇನನೆಸಗಿದರು ನಮಗೆ ಲಾಂಛನವು.

**VI ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1x3=3**

27. "ಬನದಲ್ಲಿನ ಹೂವುಗಳು ಸಾವಿರಾರು ಮಳೆಬಿಲ್ಲುಗಳಂತೆ ಸುಂದರವಾಗಿದ್ದವು."

**VII ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1x3=3**

28. ಕೈ ಕೆಸರಾದರೆ ಬಾಯಿ ಮೊಸರು

ಅಥವಾ

ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ

**VIII ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯ ಗಳನ್ನು ಬರೆಯಿರಿ.** **5x3=15**

29. ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ.
30. ಭಗವಂತ ನಿಮಗೆ ಜೀವನ ಎನ್ನುವ ಕಾಫಿ ಕೊಟ್ಟಿದ್ದಾನೆ.
31. ಆ ಮಗುವಿಗೆ ಬಡತನದ ಬವಣೆಯೇಕೆ?
32. ಪ್ರೀತಿಯನ್ನು ಹುಡುಕಿಕೊಂಡು ಜನರ ಕಡೆಗೆ ಬಂದನು.
33. ಶಾಂತಿಯಲ್ಲಿ ಬದುಕಿ ನೀ ಕರ್ತವ್ಯವನ್ನು ಮುಗಿಸು.

**IX ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ನೀರ ಕಂಡಲ್ಲಿ ....................................

........................................................

........................................................

........................... ಕೂಡಲಸಂಗಮದೇವ

ಅಥವಾ

ಮರವಿದ್ದು ಫಲವೇನು.........................

........................................................

........................................................

........................................................

........................................................

ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ

**X ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಅರ್ಜುನ ಮತ್ತು ಉತ್ತರಕುಮಾರ ಇವರ ಸಂಭಾಷಣೆಯ ಸ್ವಾರಸ್ಯವನ್ನು ನೀವು ಮೆಚ್ಚುವ ಅಂಶಗಳೊಡನೆ ಬರೆಯಿರಿ.

ಅಥವಾ

ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಇರುವ ವ್ಯತ್ಯಾಸಗಳನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿ ಬರೆಯಿರಿ.

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1x4=4 [2+2]**

36. "ಭಾರತದ ಸಂವಿಧಾನ"ದ ರಚನೆಯು ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರಮುಖ ಸಾಧನೆಗಳಲ್ಲಿ ಒಂದು. ಸಂವಿಧಾನ ರಚನೆಯಲ್ಲಿ ಇವರ ಪ್ರಕಾಂಡವಾದ ಮೇಧಾಶಕ್ತಿ, ವಿದ್ವತ್ತೆ, ದೂರದರ್ಶಿತ್ವಗಳು ಮೂಡಿಬಂದಿವೆ. ನವಮಾನವ ಸಮಾಜ ವ್ಯವಸ್ಥೆಯ ನಿರ್ಮಾಣಕ್ಕೆ ಅನುವಾಗುವ ರೀತಿ–ನೀತಿಗಳನ್ನು ಸಂವಿಧಾನದಲ್ಲಿ ಅಳವಡಿಸಿದರು. ಲೋಕತಂತ್ರದಲ್ಲಿ ಉದ್ಭವಿಸಬಹುದಾದ ಬಿಕ್ಕಟ್ಟುಗಳು, ಇಂತಹ ಸಂಕಷ್ಟಕರ ಪರಿಸ್ಥಿತಿಗಳಲ್ಲಿ ಅನುಸರಿಸಬೇಕಾದ ವಿಧಿ–ವಿಧಾನ ಹಾಗೂ ಮಾರ್ಗೋಪಾಯಗಳು ಇವನ್ನೆಲ್ಲ ಸಂವಿಧಾನ ರಚನೆಯ ಸಂದರ್ಭದಲ್ಲಿಯೇ ಸ್ಪಷ್ಟವಾಗಿ ಅಳವಡಿಸಿದರು. ಭವಿಷ್ಯತ್ತನ್ನು ಭೇದಿಸಿ ಕಾಲಗರ್ಭದಲ್ಲಿ ದೂರದೂರಕ್ಕೆ ದೃಷ್ಟಿಯನ್ನು ಹಾಯಿಸಬಲ್ಲ ಅಂಬೇಡ್ಕರರ ಅಪೂರ್ವವಾದ ವಿಚಾರ ಕ್ಷಮತೆಯನ್ನು "ಭಾರತ ಸಂವಿಧಾನ"ದಲ್ಲಿ ಹಾಸುಹೊಕ್ಕಾಗಿ ಕಾಣಬಹುದು. ಈ ಶತಮಾನ ಕಂಡ ಅದ್ವಿತೀಯ 'ಸಂವಿಧಾನಶಿಲ್ಪಿ' ಇವರು ತಮ್ಮ ಜನತೆಗೆ ಡಾ. ಅಂಬೇಡ್ಕರರ ಸಂದೇಶ ಇದು. "ಜೀವನೋದ್ದೇಶದ ಪಾವಿತ್ರ್ಯದ ಬಗೆಗೆ ನಿಮ್ಮಲ್ಲಿ ಅಚಲವಾದ ನಂಬಿಕೆಯಿರಲಿ. ಗುರಿ ಉದಾತ್ತವಾಗಿದ್ದಲ್ಲಿ ಜೀವನೋದ್ದೇಶವು ಮಹೋನ್ನತವೂ, ಶೋಭಾಯಮಾನವೂ ಆಗುತ್ತದೆ. ಒಡನಾಡಿಗಳ ಬಗೆಗಿನ ತಮ್ಮ ಕರ್ತವ್ಯವೇನೆಂಬುದರ ಅರಿವಿರುವವರು ಪುಣ್ಯಶಾಲಿಗಳು.

**ಪ್ರಶ್ನೆಗಳು**

ಅ) ಜನತೆಗೆ ಅಂಬೇಡ್ಕರರ ಸಂದೇಶವೇನು?

ಆ) 'ಭಾರತ ಸಂವಿಧಾನ'ದ ರಚನೆಯಲ್ಲಿ ಅಂಬೇಡ್ಕರರ ಪಾತ್ರವೇನು?

**XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

37. ಮತದಾನದ ಮಹತ್ವ

ಅಥವಾ

ಸದೃಢ ಆರೋಗ್ಯಕ್ಕಾಗಿ ಕ್ರೀಡೆಗಳು

**XIII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆಯ 'ಅನಿತಾ' ಎಂದು ಭಾವಿಸಿಕೊಂಡು ವರ್ಗಾವಣೆ ಪತ್ರ ಕೋರಿ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ 'ಸುರೇಶ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನದ ಬಗ್ಗೆ ಚಿತ್ರದುರ್ಗದ ಕೋಟೆ ಬೀದಿಯ ವಾಸಿಯಾದ ದಿನೇಶ್ ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

-●-●-●-